ರಾಜ್ಯದಲ್ಲಿ ಪಶು ವೈದ್ಯರ ನೇಮಕ

193 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಈಗ ಹಾಲಿ ಗೊತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಪಶುವೈದ್ಯರ ಸಂಖ್ಯೆ ಎಷ್ಟು?*

ಆ) *ಅವರನ್ನು ಖಾಯಂಗೊಳಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ? ಹಾಗಿದ್ದಲ್ಲಿ ಈ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳಲಾಗಿದೆ? ಕ್ರಮ ತೆಗೆದು ಕೊಂಡಿದ್ದಲ್ಲಿ ಅವರುಗಳು ಎಷ್ಟು ವರ್ಷಗಳಿಂದ ಸೇವೆ ಮಾಡಿದ್ದನ್ನು ಸರ್ಕಾರ ಯಾವ ರೀತಿಯಲ್ಲಿ ಪರಿಗಣಿಸಲಾಗುವುದು?*

ಇ) *ಹಾಗಿದ್ದಲ್ಲಿ, ಇವರನ್ನು ಎಂದಿನಂತೆ ಖಾಯಂ ಗೊಳಿಸಲಾಗುವುದು.*

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 25.

ಆ) ಇದೆ. ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ

ಇ) ಉದ್ಭವಿಸುವುದಿಲ್ಲ.

ಬಾಗೇಪಲ್ಲಿ ತಾಲ್ಲೂಕು ತಿಮ್ಮಂಪಲ್ಲಿ ಸಬ್ ಸ್ಟೇಷನ್ ನಿರ್ಮಾಣ.

194 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ ತಿಮ್ಮಂಪಲ್ಲಿಯ ಹತ್ತಿರ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ವತಿಯಿಂದ ಒಂದು ಸಬ್-ಸ್ಟೇಷನ್ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?*

ಆ) *ಹಾಗಿದ್ದಲ್ಲಿ, ಈ ವಿಷಯವು ಯಾವ ಹಂತದಲ್ಲಿದೆ?*

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಈ ಪ್ರಸ್ತಾವನೆಯನ್ನು ವಿವರವಾಗಿ ಪರಿಶೀಲಿಸಲಾಗುತ್ತಿದೆ.

ಕುಡಿಯುವ ನೀರಿನಲ್ಲಿಯರುವ ಫ್ಲೋರಾಯಿಡ್ ಅಂಶದ ನಿವಾರಣೆ.

195 - ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ (ಬಾಗೇಪಲ್ಲಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?